**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE/ADMI0/EST(10) 2022

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001, ದಿನಾಂಕ: 20.05.2022

# ಸುತ್ತೋಲೆ

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ವೃತ್ತಿ ಪದೋನ್ನತಿ ನೀಡುವ ಬಗ್ಗೆ

**ಉಲ್ಲೇಖ:** 1) ಸರ್ಕಾರದ ಪತ್ರ ಸಂಖ್ಯೆ:ಇಡಿ/60/ಡಿಟಿಇ/2022 ದಿನಾಂಕ:26/04/2022
2) ಈ ಕಚೇರಿ ಜ್ಞಾಪನ ಸಂಖ್ಯೆ:ತಾಂಶಿನಿ/03/ಸಿಡಿಸಿ(1)/2019-20 ದಿನಾಂಕ:03/06/2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕ ವರ್ಗದವರಿಗೆ ಎಐಸಿಟಿಇ 6ನೇ ವೇತನ ಶ್ರೇಣಿ ಅಧಿನಿಯಮ 2010, ಎಐಸಿಟಿಇ ಸಿ.ಎ.ಎಸ್ ಅಧಿನಿಯಮ 2012 ಮತ್ತು ಕಾಲಕಾಲಕ್ಕೆ ಎಐಸಿಟಿಇ ರವರು ನೀಡಿರುವ ಸ್ಪಷ್ಟೀಕರಣಗಳ ಪ್ರಕಾರ ಅರ್ಹರಿರುವ ಉಪನ್ಯಾಸಕರುಗಳಿಗೆ ವೃತ್ತಿ ಪದೋನ್ನತಿ ಸೌಲಭ್ಯವನ್ನು ನೀಡುವ ಸಲುವಾಗಿ ಉಲ್ಲೇಖ(1)ರ ಸರ್ಕಾರಿ ಆದೇಶದನ್ವಯ ಹಾಗೂ ಮೇಲೆ ತಿಳಿಸಿದ ಎಐಸಿಟಿಇ ಅಧಿನಿಯಮಗಳನ್ವಯ ಭರ್ತಿ ಮಾಡಿದ ಅರ್ಜಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಕಾಲೇಜು ಹಂತದ IQAC ಸಮಿತಿಗೆ ಸಲ್ಲಿಸಬೇಕಾಗಿರುತ್ತದೆ. ಯಾವುದೇ ಸಂಸ್ಥೆಯಲ್ಲಿ ಇದೂವರೆಗೂ ಐಕ್ಯೂಎಸಿ (IQAC) ರಚಿಸಿಲ್ಲದಿದ್ದಲ್ಲಿ, ಸದರಿ ಸಮಿತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಉಲ್ಲೇಖ(2)ರ ಜ್ಞಾಪನದಲ್ಲಿ ತಿಳಿಸಿರುವಂತೆ ರಚಿಸಲು ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಸರ್ಕಾರಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕ ವರ್ಗದವರಿಗೆ ವೃತ್ತಿ ಪದೋನ್ನತಿ(Career Advancement Scheme) ನೀಡುವ ಬಗ್ಗೆ ಎಐಸಿಟಿಇ ಆಗಿಂದಾಗ್ಗೆ ನೀಡಿರುವ ಸ್ಪಷ್ಟೀಕರಣಗಳನ್ವಯ ನಿಗದಿತ ವಿದ್ಯಾರ್ಹತೆ, ಸೇವಾವಧಿ, ತರಬೇತಿ ಕಾರ್ಯಕ್ರಮಗಳು, Orientation / Induction Programme ಹಾಗೂ ಸಂಸ್ಥೆಯಲ್ಲಿನ ಇನ್ನಿತರೆ ಚಟುವಟಿಕೆಗಳ ಬಗ್ಗೆ ಮೇಲಾಧಿಕಾರಿಗಳು ನೀಡುವ ಶಿಫಾರಸ್ಸು ಹಾಗೂ ಅನ್ವಯಿಸುವ ಇತರೆ ಅರ್ಹತೆಗಳ ಮೇಲೆ ವೃತ್ತಿ ಪದೋನ್ನತಿಯನ್ನು ಪರಿಗಣಿಸಲಾಗುವುದು.

ಎಐಸಿಟಿಇ ನಿಯಮಗಳನ್ವಯ ದಿನಾಂಕ: 07/11/2015ರೊಳಗೆ ಅರ್ಹರಿರುವ ಉಪನ್ಯಾಸಕ ವರ್ಗಕ್ಕೆ ಎಪಿಐ ಅಂಕದಿಂದ ಮಾತ್ರ ವಿನಾಯಿತಿ ನೀಡಲಾಗಿದೆ. ದಿನಾಂಕ: 07/11/2015ರ ನಂತರ ವೃತ್ತಿ ಪದೋನ್ನತಿಗೆ ಅರ್ಹತೆಯನ್ನು ಹೊಂದುವ ಉಪನ್ಯಾಸಕರುಗಳಿಗೆ ಎಪಿಐ ಅಂಕಗಳನ್ನು ಕಡ್ಡಾಯಗೊಳಿಸಲಾಗಿದ್ದು, ಅದರ ಜೊತೆಗೆ ಅರ್ಹತೆಯ ಇನ್ನಿತರ ಎಐಸಿಟಿಇ ಮಾನದಂಡಗಳನ್ನು ಪರಿಗಣಿಸಲಾಗುವುದು. ಎಪಿಐ ಅಂಕಗಳ ಆಧಾರಿತ ವೃತ್ತಿ ಪದೋನ್ನತಿಯು 6ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಮಾತ್ರ ನೀಡಬೇಕಾಗಿರುತ್ತದೆ. ದಿನಾಂಕ:01/03/2019ರಿಂದ 7ನೇ ಎಐಸಿಟಿಇ ವೇತನ ಶ್ರೇಣಿಯು ಜಾರಿಯಲ್ಲಿದ್ದು, ಸದರಿ ವೇತನ ಶ್ರೇಣಿಯಲ್ಲಿ 360 Degree Feed Back ಅನ್ನು ವೃತ್ತಿ ಪದೋನ್ನತಿಗೆ ಗಣನೆಗೆ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಮುಂದಿನ ದಿನಗಳಲ್ಲಿ ಪ್ರತ್ಯೇಕವಾಗಿ ಮಾರ್ಗಸೂಚಿಗಳನ್ನು ನೀಡಲಾಗುವುದು.

ಮಾದರಿ ಅರ್ಜಿ ನಮೂನೆಯನ್ನು/ನಮೂನೆಯ ಲಿಂಕನ್ನು ಈ ಸುತ್ತೋಲೆಯಲ್ಲಿ ನೀಡಲಾಗಿದೆ. ವೃತ್ತಿ ಪದೋನ್ನತಿಗೆ ಅರ್ಹತೆಯನ್ನು ಹೊಂದುವ ಪಾಲಿಟೆಕ್ನಿಕ್ ಉಪನ್ಯಾಸಕರುಗಳು ಸದರಿ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂದು ಮಾರ್ಗಸೂಚಿಗಳನ್ವಯ ಅರ್ಜಿಗಳನ್ನು ಭರ್ತಿ ಮಾಡಿ, ತಮಗೆ ಅನ್ವಯಿಸುವ ಹಂತಕ್ಕೆ ಸೂಕ್ತ ದೃಢೀಕೃತ ದಾಖಲಾತಿಗಳೊಂದಿಗೆ ದಿನಾಂಕ: 31/05/2022 ರೊಳಗೆ ಪ್ರಾಂಶುಪಾಲರ ಮುಖಾಂತರ ಐಕ್ಯುಎಸಿ ಗೆ ಸಲ್ಲಿಸತಕ್ಕದ್ದು.

ಕಾಲೇಜು ಹಂತದ ಐಕ್ಯುಎಸಿ ಅರ್ಹ ಉಪನ್ಯಾಸಕರುಗಳಿಂದ ಅರ್ಜಿಗಳನ್ನು ಸೂಕ್ತ ಅರ್ಹತಾ ದಾಖಲಾತಿಗಳೊಂದಿಗೆ ಪಡೆದು ಪರಿಶೀಲಿಸ ಬೇಕಾಗುತ್ತದೆ.

**(1) ದಿನಾಂಕ:07/11/2015ರೊಳಗೆ ವೃತ್ತಿ ಪದೋನ್ನತಿಗೆ ಅರ್ಹತೆಯನ್ನು ಹೊಂದುವ ಬೋಧಕ ವರ್ಗದವರ ಅರ್ಜಿಗಳನ್ನು ಸ್ವೀಕರಿಸುವುದು.(ಎಪಿಐ ವಿನಾಯಿತಿ ಇರುತ್ತದೆ, ಇನ್ನಿತರೆ ಮಾನದಂಡಗಳು ಅನ್ವಯಿಸುತ್ತವೆ).**

**(2) ದಿನಾಂಕ:07/11/2015ರಿಂದ ದಿನಾಂಕ:28/02/2019ರವರೆಗೆ ವೃತ್ತಿ ಪದೋನ್ನತಿಗೆ ಅರ್ಹತೆಯನ್ನು ಹೊಂದುವ ಬೋಧಕ ವರ್ಗದವರ ಅರ್ಜಿಗಳನ್ನು ಸ್ವೀಕರಿಸುವುದು. (ಎಪಿಐ ಅಂಕ ಹಾಗೂ ಇನ್ನಿತರೆ ಮಾನದಂಡಗಳು ಅನ್ವಯಿಸುತ್ತವೆ).**

ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕರಿಗೆ ಹಾಗೂ ಐಕ್ಯುಎಸಿ ಸದಸ್ಯರುಗಳಿಗೆ ವೃತ್ತಿ ಪದೋನ್ನತಿ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ಸಂದೇಹಗಳನ್ನು ಬಗೆಹರಿಸಲು ಮುಂದಿನ ದಿನಗಳಲ್ಲಿ ಆನ್-ಲೈನ್ ವೀಡಿಯೋ ಕಾನ್ಫರೆನ್ಸ್ ಅನ್ನು ಪ್ರತ್ಯೇಕವಾಗಿ ಆಯೋಜಿಸಲಾಗುವುದು.

ನಿರ್ದೇಶಕರು 21/05/2022

**ಲಗತ್ತು**:

1) ಕ್ರಮ ಸಂಖ್ಯೆ(1) ಕ್ಕೆ ಅನ್ವಯಿಸುವ ಮಾದರಿ ಅರ್ಜಿ ನಮೂನೆ ಹಾಗೂ ಅನುಸರಿಸಬೇಕಾದ ಮಾರ್ಗ ಸೂಚಿಯ ಲಿಂಕ್: CAS (1)
2) ಕ್ರಮ ಸಂಖ್ಯೆ(2) ಕ್ಕೆ ಅನ್ವಯಿಸುವ ಮಾದರಿ ಅರ್ಜಿ ನಮೂನೆ ಹಾಗೂ ಅನುಸರಿಸಬೇಕಾದ ಮಾರ್ಗ ಸೂಚಿಯ ಲಿಂಕ್: CAS (2)
3) ಕಾಲೇಜು ಹಂತದ ಐಕ್ಯುಎಸಿ (IQAC) ರಚನೆಯ ಬಗ್ಗೆ ಮಾಹಿತಿ.

**ಪ್ರತಿಗಳು**:

1) ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2) ಮಾನ್ಯ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.
3) ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
4) ಜಂಟಿ ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.
5) ಇ-ಆಡಳಿತ ವಿಭಾಗಕ್ಕೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
6) ಇಎಸ್‌ಟಿ(10) ವಿಭಾಗಕ್ಕೆ ಕಡತಕ್ಕಾಗಿ.